**ದಿನಾಂಕಃ27-07-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ- ಪ್ರತಿವಾದಿ ಪರಃ ಶ್ರೀ ಆರ್.ಎನ್. ವಕೀಲರಿಂದಃ-**

ನನ್ನ ಮುತ್ತಜ್ಜನ ಹೆಸರು ಮರಿಚಿಕ್ಕೇಗೌಡ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿಯವರಿಗೆ ಕರೀಬಸವೇಗೌಡ ಮತ್ತು ಕರಿಯಪ್ಪಗೌಡ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ನನ್ನ ಅಜ್ಜ ಕರಿಯಪ್ಪಗೌಡ ಇವರಿಗೆ ಸಿದ್ದೇಗೌಡ, ಚಿಕ್ಕೇಗೌಡ, ರಾಮೇಗೌಡ ಮತ್ತು ಕಾಳೇಗೌಡ ಎಂಬ 4 ಜನ ಮಕ್ಕಳು. ಕಣಿವೆದಾಸರಹಳ್ಳಿ ಗ್ರಾಮದ ಸರ್ವೆ ನಂ.76 ರಲ್ಲಿ ಒಟ್ಟು 4 ಎಕರೆ 20 ಗುಂಟೆ ಆಸ್ತಿ ಇತ್ತು ಮತ್ತು ಅದನ್ನ ಕರಿಯಪ್ಪಗೌಡ ಇವರ 4 ಜನ ಮಕ್ಕಳು ಹಿಸ್ಸೆ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂ.76 ರ 1 ಎಕರೆ 13 ಗುಂಟೆ ಆಸ್ತಿ ಕಂದಾಯ ಬಾಕಿ ಉಳಿದಿದ್ದರಿಂದ ಬೀಳು ಬಿದ್ದಿತ್ತು ಮತ್ತು ಅದನ್ನ ರಾಮೇಗೌಡ ಇವರು ಕಂದಾಯ ಪಾವತಿ ಮಾಡಿ ಅದನ್ನ 3 ನೇ ಪ್ರತಿವಾದಿ ತಮ್ಮೇಗೌಡ  ಇವರ ಹೆಸರಿಗೆ ಪುನಸ್ಥಾ೯ಪನೆ  ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.76 ರ 1 ಎಕರೆ 13 ಗುಂಟೆ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನನ್ನ ಹೆಂಡತಿ ಮತ್ತು 3 ನೇ ಪ್ರತಿವಾದಿಯ ಪತ್ನಿ ಅಕ್ಕತಂಗಿಯವರು ಎಂದರೆ ಸರಿ. 4 ನೇ ಪ್ರತಿವಾದಿಯಾದ ನನ್ನ ಸಹೋದರಿಯನ್ನ ನನ್ನ ಪತ್ನಿಯ ಸಹೋದರನಿಗೆ ವಿವಾಹ ಮಾಡಿಕೊಡಲಾಗಿದೆ ಎಂದರೆ ಸರಿ. ದಾವಾ ಅನುಸೂಚಿ ಐಟಂ ನಂ.1 ರಿಂದ 4 ರ ಆಸ್ತಿಯನ್ನ ಮತ್ತು ಸರ್ವೆ ನಂ.76 ರ 1 ಎಕರೆ 13 ಗುಂಟೆ ಆಸ್ತಿಯನ್ನ ನನಗೆ ಮತ್ತು ನನ್ನ ಸಹೋದರರಿಗೆ ನನ್ನ ತಂದೆ ಉಳುಮೆ ಮಾಡಿಕೊಂಡು ಜೀವನ ಮಾಡಲು ಸಮನಾಗಿ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಐಟಂ ನಂ.2 ರ ನ್ನ ನನಗೆ ಉಳುಮೆ ಮಾಡಲು ನನ್ನ ತಂದೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಅದೇ ರೀತಿ ದಾವಾ

ಅನುಸೂಚಿ ಐಟಂ ನಂ.3 ರ ಆಸ್ತಿಯನ್ನ 3 ನೇ ಪ್ರತಿವಾದಿ ತಮ್ಮೇಗೌಡ ಇವರಿಗೆ ಉಳುಮೆ ಮಾಡಲು ನನ್ನ ತಂದೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ 3 ನೇ ಪ್ರತಿವಾದಿ ರಾಗಿ, ಜೋಳ ಬೆಳೆದುಕೊಂಡು ಜೀವನ ಮಾಡುತ್ತಿದ್ದಾರೆ ಎಂದರೆ ಸರಿ. ಜಮೀನುಗಳಲ್ಲದೇ ನನ್ನ ತಂದೆ ನಿವೇಶನ ಮತ್ತು ಮನೆಯನ್ನ ನನ್ನ ಮತ್ತು ನನ್ನ ಸಹೋದರರ ನಡುವೆ ಹಂಚಿಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆ 25 x 25 ರ ವಿಸ್ತೀರ್ಣದ ನಿವೇಶನವನ್ನ ನನ್ನ ಹೆಸರಿಗೆ ಮಾಡಿಸಿಕೊಟ್ಟಿದ್ದಾರೆ ಆದರೆ ಯಾವುದೇ ಹಕ್ಕುದಾಖಲೆ ಮಾಡಿಕೊಟ್ಟಿಲ್ಲ ಎನ್ನುತ್ತಾರೆ. ನನ್ನ ಹೆಸರಿಗೆ ಇರುವ ನಿವೇಶನ ಅಸೆಸ್ಮೆಂಟ್ ನಂ.78 ರಲ್ಲಿ ಇದೆ ಎಂದರೆ ಸರಿ. ಅದೇ ರೀತಿ 3 ನೇ ಪ್ರತಿವಾದಿ ಹೆಸರಿನಲ್ಲಿ 48 X 16 ಅಡಿ ಅಗಲದ ಆಸ್ತಿಯನ್ನ ಸಂಬಂಧ ಖಾತೆ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಒಂದು ಮನೆ ಸಹ ಇದೆ ಎಂದರೆ ಸರಿ. ಅಸೆಸ್ಮೆಂಟ್ ನಂ.63 ರಲ್ಲಿ 48 x 16 ಅಳತೆಯ ಆಸ್ತಿಯನ್ನ 5 ನೇ ಪ್ರತಿವಾದಿ ಪರಮೇಶ್ ಇವರ ಹೆಸರಿಗೆ ಖಾತೆ ಮಾಡಿಸಲಾಗಿದೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ 5 ನೇ ಪ್ರತಿವಾದಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿ. ಅಸೆಸ್ಮೆಂಟ್ ನಂ.63 ರಲ್ಲಿ 21 x 22 ಮತ್ತು 10 x 12 ವಿಸ್ತೀರ್ಣದ ಆಸ್ತಿ ಸಂಬಂಧ ದಿನೇಶ್ ಇವರ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ. ಸದರಿ ಜಾಗದಲ್ಲಿ 6 ನೇ ಪ್ರತಿವಾದಿ ದಿನೇಶ್ ಇವರಿಗೆ ಸೇರಿದ ಮನೆ ಸಹ ಇದೆ ಎಂದರೆ ಸರಿ. ನನ್ನ ತಂದೆ 1 ನೇ ಪ್ರತಿವಾದಿ ತನ್ನ ಹೆಸರಿನಲ್ಲಿ ಯಾವುದೇ ನಿವೇಶನವನ್ನ ಉಳಿಸಿಕೊಂಡಿಲ್ಲ ಎಂದರೆ ಸರಿ. ಮೇಲೆ ಹೇಳಿದ ನಿವೇಶನ ಮತ್ತು ಮನೆಗಳು ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ವ್ಯವಸಾಯೇತರ ಆಸ್ತಿಗಳಲ್ಲಿ ನನ್ನ ಸಹೋದರಿಯರಿಗೆ ಯಾವುದೇ ಹಿಸ್ಸೆ ಕೊಟ್ಟಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಪಿತ್ರಾರ್ಜಿತ ಆಸ್ತಿಯನ್ನ ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ನನ್ನ ವಿವಾಹ ಕಾಲಕ್ಕೆ 1 ನೇ ಪ್ರತಿವಾದಿ ಸುಮಾರು ಒಂದೂವರೆ ಲಕ್ಷ

ಖರ್ಚು ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನೇ ದುಡಿದು ವಿವಾಹ ಮಾಡಿಕೊಂಡೆ ಎನ್ನುತ್ತಾರೆ. ನನ್ನ ವಿವಾಹವಾದ ದಿನ ನನ್ನ ಸಹೋದರ ಕಂಬೇಗೌಡ ಮತ್ತು ನನ್ನ ಸಹೋದರಿ ವನಜಾಕ್ಷಿ ಇವರ ವಿವಾಹವೂ ಸಹ ಆಗಿದೆ ಎಂದರೆ ಸರಿ. ನನ್ನ ಮತ್ತು ಕಂಬೇಗೌಡ ಹಾಗೂ ವನಜಾಕ್ಷಿ ಇವರ ವಿವಾಹವನ್ನ ತನ್ನ ತಂದೆ ಬಟ್ಟೆ, ದಿನಸಿ ಮತ್ತು ಇತರ ಸಾಮಾಗ್ರಿಗಳಿಗಾಗಿ ಸಾಲ ಮಾಡಿ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಪಿತ್ರಾರ್ಜಿತ ಆಸ್ತಿಗಳು ಕಣಿವೆದಾಸರಹಳ್ಳಿಯಿಂದ 2 ಕಿ.ಮೀ ದೂರದಲ್ಲಿ ಕಾಡಿನ ಹಂಚಿನಲ್ಲಿ ಇವೆ ಎಂದರೆ ಸರಿ. ಕಾಡಿನ ಹಂಚಿನಲ್ಲಿ ಇರುವ ಜಮೀನುಗಳು ಕಲ್ಲು ಮಿಶ್ರಿತ ಜಮೀನುಗಳು ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ರಾಗಿ ಹೊರತುಪಡಿಸಿ ಬೇರೆ ಬೆಳೆ ಬೆಳೆಯಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಎಲ್ಲಾ ಬೆಳೆ ಬೆಳೆಯಬಹುದು ಎನ್ನುತ್ತಾರೆ. ನಾನು ಚಿಕ್ಕವರಿದ್ದಾಗ ನನ್ನ ತಂದೆ-ತಾಯಿ ಬೇರೆಯವರ ಮನೆಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಪಿತ್ರಾರ್ಜಿತ ಆಸ್ತಿ ಕಾಡು ಹಂಚಿನಲ್ಲಿ ಇರುವುದರಿಂದ ಸದರಿ ಕಾಡಿನಲ್ಲಿ ಕಡವೆ, ಜಿಂಕೆ ಮತ್ತು ಕಾಡಂದಿಗಳು ಸಾಕಷ್ಟು ಇವೆ ಎಂದರೆ ಸಾಕ್ಷಿ ಇತ್ತೀಚೆಗೆ ಇವೆ ಮೊದಲು ಇರಲಿಲ್ಲ ಎನ್ನುತ್ತಾರೆ. ಸದರಿ ಜಮೀನುಗಳಲ್ಲಿ ಯಾವುದೇ ಬೆಳೆ ಬೆಳೆದರೆ ಕಾಡು ಪ್ರಾಣಿಗಳಿಂದ ಸಂರಕ್ಷಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. 2007 ರಲ್ಲಿ ನನ್ನ ತಂದೆ ಜಮೀನಿನ ಅಭಿವೃದ್ಧಿಗಾಗಿ ಚೀಕೋ ಬ್ಯಾಂಕ್ ನಿಂದ 1 ಲಕ್ಷ ಸಾಲ ಪಡೆದಿದ್ದರು ಎಂದರೆ ಸಾಕ್ಷಿ ನಾನು 1994 ರಲ್ಲಿ ಮನೆ ಬಿಟ್ಟಿದ್ದು ಅದೂವರೆಗೆ ನನ್ನ ಕುಟುಂಬಕ್ಕೆ ಯಾವುದೇ ಸಾಲ ಇರಲಿಲ್ಲ ಆದರೆ ಅವರು ವಾಣಿಜ್ಯ ನಿವೇಶನ ಖರೀದಿ ಮಾಡಲು ಸಾಲ ಪಡೆದಿರುತ್ತಾರೆ ಎನ್ನುತ್ತಾರೆ. 2007 ರಲ್ಲಿ ನನ್ನ ತಂದೆ ಪಡೆದಿದ್ದ 1 ಲಕ್ಷ ಸಾಲದಲ್ಲಿ ಸರ್ವೆ ನಂ.41 ರ ಆಸ್ತಿಯಲ್ಲಿ ಜೆ.ಸಿ.ಬಿ ಮುಖಾಂತರ ಕಲ್ಲು ತೆಗೆಸಿ ಅಭಿವೃದ್ಧಿಪಡಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ

ಆಸ್ತಿಯನ್ನ ಬಂಡವಾಳ ಹೂಡಿ ಅಬದ್ದು ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಆಸ್ತಿ ಕಡಿಮೆ ಇದ್ದುದರಿಂದ ನಾನು ಮತ್ತು ನನ್ನ ಸಹೋದರರು ಪ್ರತ್ಯೇಕ ಆಗಿ ಜೀವನ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನಾನು ಒಬ್ಬ ಮನೆಯಿಂದ ಹೊರಗಡೆ ಬಂದು ಜೀವನ ಮಾಡುತ್ತಿದ್ದೇನೆ ಎನ್ನುತ್ತಾರೆ. ನನ್ನ ಸಹೋದರ ತಮ್ಮೇಗೌಡ ಮಾತ್ರ ಜಮೀನಿನಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ಸಹೋದರರ ಪೈಕಿ ದಿನೇಶ ಲೇವಾದೇವಿ ವ್ಯವಹಾರ ಮಾಡುತ್ತಿದ್ದಾನೆ ಮತ್ತು ಪರಮೇಶ ಈತ ಅಂಗಡಿ ವ್ಯಾಪಾರ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ತಂದೆ ಪಿತ್ರಾರ್ಜಿತ ಆಸ್ತಿಗಳನ್ನ ನನಗೆ ಮತ್ತು ನನ್ನ ಸಹೋದರರಿಗೆ ಉಳಿಸಿಕೊಟ್ಟಿದ್ದರಿಂದ ಅವುಗಳ ಪ್ರತಿಫಲವನ್ನ ನಾನು ಮತ್ತು ನನ್ನ ಸಹೋದರರು ಅನುಭವಿಸುತ್ತಿದ್ದೇವೆ ಎಂದರೆ ಸಾಕ್ಷಿ ನನ್ನ ಸಹೋದರರಾದ ದಿನೇಶ, ಪರಮೇಶ ಹಾಗೂ ಕಂಬೇಗೌಡ ಅನುಭವಿಸುತ್ತಿದ್ದಾರೆ ನನಗೆ ಯಾವುದೇ ಪ್ರತಿಫಲ ಸಿಗುತ್ತಿಲ್ಲ ಎನ್ನುತ್ತಾರೆ. ನಾನಾಗಲೀ ಅಥವಾ 3 ನೇ ಪ್ರತಿವಾದಿಯಾಗಲೀ ನನ್ನ ತಂದೆ-ತಾಯಿಯ ಯೋಗಕ್ಷೇಮವನ್ನ ನೋಡುತ್ತಿಲ್ಲ ಎಂದರೆ ಸಾಕ್ಷಿ 2021 ರಲ್ಲಿ ದಾನಪತ್ರ ಬರೆಯುವವರೆಗೆ ನಾವು ನೋಡಿಕೊಳ್ಳುತ್ತಿದ್ದೆವು ಆದರೆ ಸದರಿ ಪತ್ರ ವ್ಯವಹಾರ ಆದ ನಂತರ ಅವರ ಜೀವನಾಂಶವನ್ನ ನಾನು ನೋಡಿಕೊಳ್ಳುತ್ತಿಲ್ಲ ಎನ್ನುತ್ತಾರೆ. ನನ್ನ ವಿವಾಹವಾದ್ದರಿಂದ ನಾನು ಚಿಕ್ಕಮಗಳೂರಿನಲ್ಲಿ ಮನೆ ಮಾಡಿಕೊಂಡಿದ್ದು ನನ್ನ ತಂದೆ-ತಾಯಿ ಜೀವನಾಂಶವನ್ನ ನೋಡಿಕೊಂಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಚೀಕೋ ಬ್ಯಾಂಕ್ ನಲ್ಲಿ ಪಡೆದ ಸಾಲವನ್ನ ಮರುಪಾವತಿ ಮಾಡದೇ ಅದು ಸುಸ್ತಿ ಬಡ್ಡಿ ಸೇರಿ 5 ಲಕ್ಷ ಮೊತ್ತ ಆಗಿತ್ತು ಎಂದರೆ ಸರಿಯಲ್ಲ. ನಾನಾಗಲೀ ಅಥವಾ ತಮ್ಮೇಗೌಡ ಆಗಲೀ ಸದರಿ ಸಾಲದ ಸಂಬಂಧ ಯಾವುದೇ ಹಣ ಪಾವತಿ ಮಾಡಿಲ್ಲ ಎಂದರೆ ಸರಿ. ಚೀಕೋ ಬ್ಯಾಂಕ್ ನಲ್ಲಿ ಬಾಕಿ ಇದ್ದ 5 ಲಕ್ಷ ಸಾಲವನ್ನ ದಿನೇಶ ಮತ್ತು ಪರಮೇಶ ತಮ್ಮ ಸ್ವಂತ ಹಣದಲ್ಲಿ ತೀರುವಳಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನ್ನ

ಗಮನಕ್ಕೆ ಬಾರದಂತೆ ಅವರು ಸಾಲ ಮಾಡಿದ್ದರು ಆದ್ದರಿಂದ ಅದನ್ನ ತೀರಿಸಿದ್ದಾರೆ ಎನ್ನುತ್ತಾರೆ. ದಿನೇಶ ಮತ್ತು ಪರಮೇಶ  ಇವರು ತಮ್ಮ ಸ್ವಂತ ದುಡಿಮೆಯಿಂದ ಚೀಕೋ ಬ್ಯಾಂಕ್ ನಲ್ಲಿ ಇದ್ದ ಸಾಲದ ಹಣವನ್ನ ತೀರುವಳಿ ಮಾಡಿದ್ದರಿಂದ ಮತ್ತು ನಾನು ಮತ್ತು ತಮ್ಮೇಗೌಡ ಸದರಿ ಸಾಲ ತೀರುವಳಿಗಾಗಿ ಯಾವುದೇ ಹಣ ಪಾವತಿ ಮಾಡದೇ ಇದ್ದುದರಿಂದ ನನ್ನ ತಂದೆ ದಿನೇಶ ಮತ್ತು ಪರಮೇಶ ಇವರ ಪರವಾಗಿ **2** ಆಸ್ತಿ ಸಂಬಂಧ ದಾನಪತ್ರ ಮಾಡಿದ್ದಾರೆ ಎಂದರೆ ಸಾಕ್ಷಿ ಅವರು ಸಾಲ ಮಾಡಿದ ಮಾಹಿತಿಯನ್ನ ನನಗೆ  ಕೊಟ್ಟಿಲ್ಲ ಎನ್ನುತ್ತಾರೆ. ನನಗೆ ಎಲ್ಲಾ ವಿಚಾರ ಸಂಪೂರ್ಣವಾಗಿ ಗೊತ್ತಿದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. **5** ಮತ್ತು **6** ನೇ ಪ್ರತಿವಾದಿಗಳು ತಾವು ತೀರುವಳಿ ಮಾಡಿರುವ ಸಾಲದ ಹಣವನ್ನ ವಾಪಾಸ್ ಕೊಟ್ಟರೆ ದಾವಾ ಸ್ವತ್ತುಗಳಲ್ಲಿ ಸಮವಾಗಿ ಹಿಸ್ಸೆ ಮಾಡಿಕೊಳ್ಳಲು ತಯಾರಿದ್ದಾರೆ ಎಂದರೆ ಸಾಕ್ಷಿ ಸದರಿಯವರು ಸಾಲ ಏಕೆ ಮಾಡಿದ್ದರು ಎಂದು ನನಗೆ ಮಾಹಿತಿ ಕೊಟ್ಟಿಲ್ಲ ಎನ್ನುತ್ತಾರೆ.

ನನ್ನ ತಾಯಿಗೆ **3** ಜನ ಸಹೋದರರು. ನನ್ನ ಸೋದರಮಾವಂದಿರು ಅನುಕೂಲಸ್ಥರು ಎಂದರೆ ಸಾಕ್ಷಿ **3** ಜನರ ಪೈಕಿ ಒಬ್ಬರು  ಮಾತ್ರ ಚೆನ್ನಾಗಿದ್ದಾರೆ ಎನ್ನುತ್ತಾರೆ. ದಾವಾ ಅನುಸೂಚಿ ಐಟಂ ನಂ.**5** ರ ಸ್ವತ್ತು ನನ್ನ ತಾಯಿಗೆ ಅವರ ತವರು ಮನೆಯಿಂದ ಬಳುವಳಿಯಾಗಿ ಬಂದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸದರಿ ಆಸ್ತಿಯನ್ನ ನಾನು ಮತ್ತು ಇತರರು ದುಡಿದು ಕ್ರಯಕ್ಕೆ ಖರೀದಿ  ಮಾಡಿದ್ದೇವೆ ಎನ್ನುತ್ತಾರೆ. ಸದರಿ ಆಸ್ತಿ ನನ್ನ ತಾಯಿಯ ಹೆಸರಿಗೆ ಬಂದಾಗ ನಾನು ಬಾಲ್ಯದವನು ಎಂದರೆ ಸರಿಯಲ್ಲ. ದಾವಾ ಅನುಸೂಚಿ ಐಟಂ ನಂ.**5** ರ ಸಂಬಂಧ ಖರೀದಿ ಪತ್ರವನ್ನ ನಾನು ನೋಡಿದ್ದೇನೆ. ಸದರಿ ಪತ್ರದಲ್ಲಿ ನನ್ನ ತಾಯಿ ಹೊರತುಪಡಿಸಿ ನಾನಾಗಲೀ ಅಥವಾ ನನ್ನ ಇತರ ಕುಟುಂಬ ಸದಸ್ಯರಾಗಲೀ ಸಹಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಆಸ್ತಿಯನ್ನ ನನ್ನ ಹೆಸರಿಗೆ

ಖರೀದಿ ಪತ್ರ ಬರೆಸಬೇಕೆಂದು ಉದ್ದೇಶಿಸಲಾಗಿತ್ತು ಆದರೆ ನನ್ನ ಹೆಸರಿಗೆ ಖರೀದಿ ಪತ್ರ ಬರೆಸಿದರೆ ನನ್ನ ಉಳಿದ ಸಹೋದರರಿಗೆ ಹಿಸ್ಸೆಗೆ ತೊಂದರೆ ಆಗುತ್ತದೆ ಎಂದು ನನ್ನ ತಾಯಿ ಹೆಸರಿನಲ್ಲಿ ಖರೀದಿ ಪತ್ರ ಬರೆಸಲಾಗಿದೆ ಎನ್ನುತ್ತಾರೆ. ನನ್ನ ಸೋದರಮಾವಂದಿರು ದಾವಾ ಅನುಸೂಚಿ ಐಟಂ ನಂ.5 ರ ಆಸ್ತಿಯನ್ನ ಯಾವುದೇ ಪ್ರತಿಫಲ ಪಡೆಯದೇ ಸ್ತ್ರಿ ಧನದ ರೂಪದಲ್ಲಿ ನನ್ನ ತಾಯಿಗೆ ಕೊಟ್ಟಿರುವುದರಿಂದ ಈ ಸಂಬಂಧ ದಸ್ತಾವೇಜಿನಲ್ಲಿ ನನ್ನ ಸಹಿಯಾಗಲೀ ಅಥವಾ ನನ್ನ ಇತರ ಕುಟುಂಬದ ಸದಸ್ಯರ ಸಹಿ ಪಡೆದಿಲ್ಲ ಎಂದರೆ ಸಾಕ್ಷಿ ನಾವು ಯಾರೂ ಸಹಿ ಮಾಡಿಲ್ಲ ಎನ್ನುತ್ತಾರೆ. ದಾವಾ ಅನುಸೂಚಿ ಐಟಂ ನಂ.5 ರ ಆಸ್ತಿಯಲ್ಲಿ ಹೇಗಾದರೂ ಮಾಡಿ ಹಿಸ್ಸೆ ಪಡೆಯಬೇಕೆಂಬ ಉದ್ದೇಶದಿಂದ ಸದರಿ ಆಸ್ತಿಯನ್ನ ನಾನು ಮತ್ತು ನನ್ನ ಕುಟುಂಬಸ್ಥರು ಸೇರಿ ಖರೀದಿ ಮಾಡಿದ್ದೇವೆ ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಐಟಂ ನಂ.5 ರ ಆಸ್ತಿಯನ್ನ ನನ್ನ ತಾಯಿ ಹೆಸರಿಗೆ ಮಾಡಿದ ಕಾಲಕ್ಕೆ ನಾನು ಮತ್ತು ನನ್ನ ಸಹೋದರ ಸಹೋದರಿಯರು ಅಪ್ರಾಪ್ತ ವಯಸ್ಕರಾಗಿದ್ದೆವು ಎಂದರೆ ಸರಿಯಲ್ಲ. ಆ ಕಾಲಕ್ಕೆ ನನಗಾಗಲೀ ಅಥವಾ ನನ್ನ ಸಹೋದರ ಸಹೋದರಿಯರಿಗಾಗಲೀ ಯಾವುದೇ ವರಮಾನ ಇರಲಿಲ್ಲ ಎಂದರೆ ಸರಿಯಲ್ಲ.  ದಾವಾ ಅನುಸೂಚಿ ಐಟಂ ನಂ.1 ರಿಂದ 4 ರ ಆಸ್ತಿಗಳಲ್ಲಿ ನಾನು, ನನ್ನ ಸಹೋದರರು ಉಳುಮೆ ಮಾಡಿ ಅದರ ಪ್ರತಿಫಲವನ್ನ ಅನುಭವಿಸುತ್ತಿದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಐಟಂ ನಂ.5 ರ ಆಸ್ತಿಯಲ್ಲಿ ಮೊದಲು ಅಡಿಕೆ ಗಿಡ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ತಮ್ಮೇಗೌಡ ಅದರಲ್ಲಿ ಅಡಿಕೆ ಗಿಡ ಹಾಕಿದ್ದರಿಂದ ಅದರಲ್ಲಿ 22 ಗುಂಟೆ ಜಮೀನನ್ನ ಆತನಿಗೆ ಕೊಡಲಾಗಿತ್ತು ಅದನ್ನ ಇತ್ತೀಚೆಗೆ ವಾಪಾಸ್ ಬಿಡಿಸಿಕೊಂಡಿದ್ದಾರೆ ಎನ್ನುತ್ತಾರೆ. ನನ್ನ ತಂದೆ-ತಾಯಿ ದಾವಾ ಐಟಂ ನಂ.5 ರಲ್ಲಿಯೇ ವಾಸವಿದ್ದಾರೆ ಎಂದರೆ ಸಾಕ್ಷಿ

ಊರಿನಲ್ಲಿಯೂ ಇರುತ್ತಾರೆ ಮತ್ತು ಆಸ್ತಿಯಲ್ಲಿಯೂ ಸಹ ಇರುತ್ತಾರೆ ಎನ್ನುತ್ತಾರೆ. ನನ್ನ ತಂದೆ-ತಾಯಿಗೆ ವಾಸ ಮಾಡಲು ಪ್ರತ್ಯೇಕ ಮನೆ ಇಲ್ಲದೇ ಇದ್ದುದರಿಂದ ನನ್ನ ಸಹೋದರ ದಿನೇಶ ದಾವಾ ಐಟಂ ನಂ.5 ರಲ್ಲಿ ಮನೆ ಕಟ್ಟಿಸಿಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಊರಿನಲ್ಲಿಯೂ ಸಹ ಅವರಿಗೆ ಮನೆ ಇದೆ ಎನ್ನುತ್ತಾರೆ. ನನ್ನ ತಂದೆ-ತಾಯಿ ಹೆಸರಿನಲ್ಲಿ ಕಣಿವೆದಾಸರಹಳ್ಳಿಯಲ್ಲಿ ಯಾವುದೇ ಮನೆ ಅಥವಾ ನಿವೇಶನ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಸಾಕ್ಷಿ ಮುಂದುವರಿದು ದಿನೇಶ ಈತನಿಗೆ ತನ್ನ ಮೊಮ್ಮಗಳನ್ನೇ ತಂದುಕೊಂಡಿರುವುದರಿಂದ ಆತನಿಗೆ ದೊಡ್ಡ ಮನೆ ಉಳಿಸಿದ್ದಾರೆ ಎನ್ನುತ್ತಾರೆ. ಹುಟ್ಟಿದಾಗಿನಿಂದ ನಾನು ಮತ್ತು ನನ್ನ ಕುಟುಂಬ ದಿನೇಶ ವಾಸ ಮಾಡುತ್ತಿರುವ ಮನೆಯಲ್ಲಿಯೇ ಇದ್ದೆವು ಎಂದರೆ ಸರಿ. ಸದರಿ ಮನೆ ಸುಮಾರು 50 ರಿಂದ 60 ವರ್ಷಗಳ ಹಳೆ ಮನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸುಮಾರು 40 ವರ್ಷಗಳ ಮನೆ ಎನ್ನುತ್ತಾರೆ. ಆಲಿ ನನಗೆ 55 ವರ್ಷ ವಯಸ್ಸು. ನೀವು ಹುಟ್ಟುವ ಮೊದಲು ಎಲ್ಲಿ ವಾಸವಿದ್ದೀರಿ ಎಂದರೆ ಸಾಕ್ಷಿ ದಿನೇಶ ವಾಸ ಮಾಡುತ್ತಿರುವ ಮನೆಯನ್ನ ನವೀಕರಣ ಮಾಡಲಾಗಿದೆ ಅದಕ್ಕೂ ಮೊದಲು ಅಲ್ಲಿಯೇ ಇದ್ದೆವು ಎನ್ನುತ್ತಾರೆ. ದಿನೇಶ ಈತನ ಪಾಲಿಗೆ ಮನೆ, ಆಸ್ತಿ ಬಂದ ನಂತರ ಆತ ಆರ್.ಸಿ.ಸಿ ಮನೆ ಕಟ್ಟಿದ್ದಾನೆ ಎಂದರೆ ಸಾಕ್ಷಿ ಹಳೆ ಮನೆ ಆಗೆಯೇ ಇದೆ ಹೆಚ್ಚುವರಿ ಇದ್ದ ಜಾಗದಲ್ಲಿ ಆರ್.ಸಿ.ಸಿ ಮನೆ ಮಾಡಿಕೊಂಡಿರುತ್ತಾನೆ ಎನ್ನುತ್ತಾರೆ. ನಾನು ಕುಟುಂಬದಿಂದ ಹೊರಗಡೆ ಬಂದ ಕಾಲಕ್ಕೆ ನನ್ನ ತಂದೆ ನನಗೆ 90 ಸಾವಿರ ಹಣ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಣದಲ್ಲಿ ನಾನು ನಿವೇಶನ ಮಾಡಿಕೊಂಡು ಮನೆ ಕಟ್ಟಿಕೊಂಡು ವಾಸವಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು 3 ನೇ ಪ್ರತಿವಾದಿ ಅಕ್ಕತಂಗಿಯರನ್ನ ವಿವಾಹ ಮಾಡಿಕೊಂಡಿರುವುದರಿಂದ 3 ನೇ ಪ್ರತಿವಾದಿ ಹೆಸರಿನಲ್ಲಿ ಇರುವ ಯಾವುದೇ ಪಿತ್ರಾರ್ಜಿತ ಆಸ್ತಿಯನ್ನ ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ

ಎಂದರೆ ಸರಿಯಲ್ಲ. ನನ್ನ ಸಹೋದರಿ ವನಜಾಕ್ಷಿ ಮತ್ತು ಅವರ ಗಂಡ ನನ್ನ ತಂದೆ-ತಾಯಿ ಜೊತೆ ಬಂದು ವಾಸವಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ಬಂದಿದ್ದರಿಂದಲೇ ನನ್ನನ್ನ ಹೊರಗಡೆ ಕಳುಹಿಸಿದರು ಎನ್ನುತ್ತಾರೆ. ನನ್ನ ಅತ್ತೆ ಕೊರೋನಾ ಅವಧಿಯಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಅತ್ತೆ ತೀರಿಕೊಂಡ ನಂತರ ನನ್ನ ಪತ್ನಿ ಮತ್ತು 3 ನೇ ಪ್ರತಿವಾದಿಯ ಪತ್ನಿ ಅವರ ಕುಟುಂಬದ ಆಸ್ತಿಗೆ ಹಿಸ್ಸೆಗೆ ಹೋಗಿದ್ದರಿಂದ ನನ್ನ ತಂಗಿ ಮತ್ತು ಅವರ ಮಕ್ಕಳನ್ನ ಮನೆಯಿಂದ ಹೊರ ಹಾಕಿರುತ್ತಾರೆ ಎಂದರೆ ಸಾಕ್ಷಿ 1994 ರಲ್ಲಿಯೇ ಅವರು ನನ್ನ ತಂದೆ-ತಾಯಿ ಜೊತೆ ಬಂದು ವಾಸವಿದ್ದರು ಎನ್ನುತ್ರ್ತಾರೆ. ನನ್ನ ತಂಗಿ ಮತ್ತು ಅವರ ಮಕ್ಕಳು 1994 ರಲ್ಲಿಯೇ ನಮ್ಮ ಮನೆಗೆ ವಾಸಕ್ಕೆ ಬಂದರು ಎಂದು ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ಆಸ್ತಿ ಅಭಿವೃದ್ದಿಗೆ ಮಾಡಿದ ಸಾಲ ತೀರುವಳಿ ಮಾಡಲು ನಾನು ಭಾದ್ಯಸ್ಥ ಎಂದರೆ ಸರಿಯಲ್ಲ. ದಾವಾ ಐಟಂ ನಂ.5 ರ ಆಸ್ತಿ ನನ್ನ ತಾಯಿಯ ಸ್ವಯಾರ್ಜಿತ ಆಸ್ತಿಯಾದ್ದರಿಂದ ಅದರಲ್ಲಿ ನನಗೆ ಹಿಸ್ಸೆ ಕೇಳುವ ಹಕ್ಲು ಇಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ- 3 ನೇ ಪ್ರತಿವಾದಿ ಪರಃ ವಕೀಲರಿಂದಃ-

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃವಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್ಆರ್ಃ

ಓ.ಎಸ್.ನಂಃ 60/2022
ಪಿ.ಡಬ್ಲ್ಯೂಃ 1